ಬೆಳೆಯುವುದಿಲ್ಲ ಅದಕ್ಕೆ ಸರ್ಕಾರದವರು ಕೊಟ್ಟಂಥ ಹಣ ಏನೇನೂ ಸಾಲದು. ಈ ನಾಲ್ಕು ತಿಂಗಳಾದ ಮೇಲೆ ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸಿ ಫ್ಯಾಮಿಲ್ ಬರುವ ಪ್ರದೇಶಗಳಿಗೆ ಶಾಶ್ವತ ಪರಿಹಾರವನ್ನು ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಫ್ಯಾಮಿಲ್ ರಿಲೀಫ್ ವರ್ಕ್ಸ್‌ಗೆ ಹೆಚ್ಚು ಲಕ್ಷ್ಯ ಕೊಟ್ಟು ಫ್ಯಾಮಿಲ್ ರಿಲೀಫ್ ಬೋರ್ಡನ್ನು ರಚನೆ ಮಾಡಬೇಕೆಂದು ಈ ಸಭಾಸದ್ಯರು ಎಷ್ಟೋಸಾರಿ ಒತ್ತಾಯಮಾಡಿ ಹೇಳಿದರೂ ಇದುವರೆಗೂ ಅದು ಕಾರ್ಯಗತವಾಗಲಿಲ್ಲವೆಂದು ಹೇಳುತ್ತೇನೆ. ಈ ವಿಷಯದಲ್ಲಿ ಸರ್ಕಾರದವರು ಹೆಚ್ಚು ಲಕ್ಷ್ಯ ಕೊಡಬೇಕೆಂದು ಹೇಳಿ ಇದನ್ನು ಅನುಮೋದಿಸುತ್ತಾ, ಅಧ್ಯಕ್ಷರನ್ನು ಅಭಿನಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

Business of the House

Mr. SPEAKER.—I wish to inform the House, as I have already stated that the debate will conclude to-day. I would like to know from the Government what time they will require for reply so that I may adjust the time.

Sri S. R. KANTHI.—So far as I am concerned, I do not take much time. But other Ministers will take some time. It may be two hours.

Mr. SPEAKER.—It will close at 6 o'clock. So, till 4 o'clock, I will allow the debate.

DEMANDS FOR GRANTS IN ADVANCE (VOTE ON ACCOUNT) FOR THE YEAR 1962-63

ಶ್ರೀ ಬಿ. ಹುಚ್ಚೇಗೌಡ.—ಮಾನ್ಯ ಸಭಾಪತಿಗಳೇ, ಈ ದಿವಸ ಈ ಅಂದಾಜು ಪ್ರತಿಕೆಯ ಮೇಲೆ ಮಾತನಾಡ ಬೇಕಾದರೆ ನಮಗೆ ಒಂದು ಅನಾನುಕೂಲವಿದೆ. ಈಗ ತಾನೇ ಮೂರನೆಯ ಮಹಾಚುನಾವಣೆ ನಡೆದಿದೆ. ಹೊಸ ಮಂತ್ರಿ ಮಂಡಲ ಬಂದಿದೆ. ಬಂದ ಮೇಲೆ ಈ ಮಂತ್ರಿ ಮಂಡಲದವರ ನೀತಿಯನ್ನು ಮತ್ತು ಅವರ ಕಾರ್ಯ ಕ್ರಮದ ಒಂದು ತತ್ವವನ್ನು ಅರಿತು ನಾವು ಮಾತನಾಡಿದ್ದರೆ ಚೆನ್ನಾಗಿತ್ತು. ಏಕೆಂದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಂಚೆಯಾಗಿದ್ದರೆ ನಮಗೆ ಅವರ ತತ್ವ ದೃಷ್ಟಿಯಿಂದ ಯಾವ ಯಾವ ಬದಲಾವಣೆಯನ್ನು ತೋರಿಸುತ್ತಿದ್ದರು ಎಂಬುದನ್ನು ನೋಡಿ ಮಾತನಾಡುವುದಕ್ಕೆ ಅನುಕೂಲವಾಗಿತ್ತು. ಈಗ ಅಂತಹ ಒಂದು ಅನನುಕೂಲದ ಪರಿಸ್ಥಿತಿಯಲ್ಲಿ ಮಾತನಾಡಬೇಕಾಗಿದೆ.

ಸ್ವಾಮಿ, ಈಗ ಇನ್ನೂ ಮಂತ್ರಿ ಮಂಡಲ ರಚನೆ ಪೂರ್ಣವಾಗಿಲ್ಲ. ಏಕೆಂದರೆ ಮೊದಲನೆಯಾದಾಗಿ ನಮಗೆ ಇರತಕ್ಕ ಒಂದು ಮುಖ್ಯವಾದ ಅನನುಕೂಲ ಈ ಮಂತ್ರಿ ಮಂಡಲ ರಚನೆ ನಿರ್ಧಾರವಾಗುತ್ತಿರುವುದು. ಚುನಾವಣೆಯಾಗಿ ಒಂದು ತಿಂಗಳಾದರೂ ಇನ್ನೂ ಮಂತ್ರಿ ಮಂಡಲ ರಚನೆ ಯಾಗದೆಯೇ ಸರ್ಕಾರದ ಆಡಳಿತ ಯಂತ್ರ ನಡೆಯುತ್ತಿರುವುದರಿಂದ ದೇಶದಲ್ಲಿ ಜನಗಳು ಬಹಳ ಮಟ್ಟಿಗೆ ಸರ್ಕಾರದ ವಿಚಾರದಲ್ಲಿ ಒಂದು ಉದಾಸೀನ ಮನೋಭಾವವನ್ನು ತಾಳುತ್ತಿದ್ದಾರೆ. ಏತಕ್ಕೆ ಈ ರೀತಿ ಮಾತನಾಡುತ್ತಿದ್ದೇನೆಂಬುದನ್ನು ತಮ್ಮ ಮುಂದೆ ಅರಿಕೆ ಮಾಡಿ ಕೊಳ್ಳುತ್ತೇನೆ. ನಮಗೆ ದೇಶ ಮುಖ್ಯ.

1-30 P.M.

ಯಾವ ಸರ್ಕಾರ ಆಗಲಿ ಅದು ತನ್ನ ಘನತೆ, ಗೌರವಗಳನ್ನು ಹೆಚ್ಚಿಸಿಕೊಂಡು ಬರಬೇಕೆನ್ನುವುದು ಒಂದು. ಅಷ್ಟೇ ಅಲ್ಲ; ಹೊರಗಡೆಯೂ ಕೂಡ ಮೈಸೂರು ದೇಶ ಮಾದರಿ ದೇಶ ಎಂದು ಅನಿಸಿಕೊಳ್ಳಬೇಕು. ನಾವು ಪ್ರತಿ ಪಕ್ಷದಲ್ಲಿ ಇದ್ದರೂ ಕೂಡ ಮೈಸೂರು ಎಂದರೆ ಅವರು ಮಾಡುವ ತಪ್ಪಿಗೆ ನಮಗೂ ಕೆಟ್ಟ ಹೆಸರು ಬರುತ್ತದೆ ಎಂದು ನಮಗೂ ಭಯವಿದೆ. ಅವರು ಮಾಡಿದ ತಪ್ಪಿಗೂ ಕೂಡ ನಾವು ಈ ಸಭೆಯಲ್ಲಿ ಭಾಗಿಗಳಾಗಿದ್ದೇವೆ. ಆದ್ದರಿಂದ ನಮ್ಮ ದೇಶದ ಘನತೆ, ಗೌರವಗಳನ್ನು ಹೆಚ್ಚಿಸುವ ರೀತಿಯಲ್ಲಿ ಆ ಪಕ್ಷದವರು ಸರ್ಕಾರ ನಡೆಸಲಿ ಎಂದು ನಮ್ಮ ಭಾವನೆ ಇರುವಾಗ ಅವರು ಇನ್ನೂ ಸರಿಯಾದ ಒಂದು ಮಂತ್ರಿ ಮಂಡಲ ರಚನೆ ಮಾಡಿಲ್ಲ. ಒಂದು ತಿಂಗಳು ತೆಗೆದುಕೊಂಡಿದ್ದಾರೆ. ಮದರಾಸಿನಲ್ಲಿ ಎರಡು ದಿವಸಗಳಲ್ಲಿ ಮಂತ್ರಿ ಮಂಡಲ ರಚನೆ ಮಾಡಿದರು, ಕೇಂದ್ರ ಸರ್ಕಾರ ಅವರ ಮೇಲೆ ಪ್ರಭಾವ ಬೀರುವ ಹಾಗೇ ಇಲ್ಲ. ನಮ್ಮ ರಾಜ್ಯದಲ್ಲಿ ನಮ್ಮ ವ್ಯಾಜ್ಯ ಬಗೆಹರಿಸಿಕೊಳ್ಳುವುದಕ್ಕಾಗದೇ ಒಂದು ಅರೋಕೇಷ್ಟ್ ತೆಗೆದುಕೊಳ್ಳಿ, ಹಣಕಾಸಿನ ವಿಚಾರ ತೆಗೆದುಕೊಳ್ಳಿ. ಪ್ರತಿಯೊಂದಕ್ಕೂ ಅಲ್ಲಿ ಬೇಡಿಕೆಗೆ ಹೋಗಬೇಕು. ನದೀ ನೀರಿನ ವಿಷಯದಲ್ಲೂ ಸಹ ಅನಡ್ಡೆ. ಅದರಲ್ಲೂ ಘಂಟಾ ಘೋಷವಾಗಿ ಅಂಧ್ರದವರು ಇವೊತ್ತು ತಮಗೆ ಯಾವುದು ಬೇಕೋ ಅದನ್ನು ಕಡ್ಡಾಯವಾಗಿ ತೆಗೆದು ಕೊಂಡೇ ತೆಗೆದು ಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಹೆದರಿಸಿ ತೆಗೆದು ಕೊಳ್ಳುವಷ್ಟು ಪ್ರಭಾವ ಅವರು ಬೀರುತ್ತಾರೆ. ಮದರಾಸಿನವರು ಕೂಡ ಅದೇ ರೀತಿಮಾಡುತ್ತಾರೆ. ಮಹಾರಾಷ್ಟ್ರದವರೂ ಕೂಡ ಅಷ್ಟೆ. ಮೂರು ಕಡೆಯವರೂ ಕೂಡ ನಮ್ಮ ಮೇಲೆ ಆಕ್ರಮಣ ನಡೆಸುತ್ತಾ ಇದ್ದಾರೆ. ಅವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ತೋರಿಸುತ್ತಾ ಇದ್ದಾರೆ. ನಮ್ಮಲ್ಲಿರತಕ್ಕ ಈ ಸರ್ಕಾರದ ಅದಕ್ಷತೆ ಮತ್ತು ಇದರಲ್ಲಿರತಕ್ಕ ಗ್ರೂಪ್ಸ್‌ಈ ವ್ಯಾಜ್ಯದಲ್ಲಿ ಮಂತ್ರಿ ಮಂಡಲ ರಚಿಸುವುದನ್ನೇ ತಿಂಗಳುಗಟ್ಟಲೆ ಮುಂದುವರಿಸುತ್ತಾ ಇದ್ದೀರಿ. ಇದರಿಂದ ಕೊನೆಗೆ ಏನಾಗುತ್ತದೆ ಎಂದರೆ ಆ ಗ್ರೂಪ್‌ನವರನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ, ಈ ಗ್ರೂಪ್‌ನವರನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾ ಅವರು ಅರ್ಧ, ಇವರು ಅರ್ಧ ಸೇರಿಕೊಂಡು ಇನ್ನೊಂದು ಗ್ರೂಪ್ ಆಗುತ್ತದೆ. ಇಂಥಾ ಒಂದು ಸನ್ನಿವೇಶದಲ್ಲಿ ನಾವು ಈ ಸಭೆಯಲ್ಲಿ ಭಾಗವಹಿಸ ಬೇಕಾಗಿದೆಯೆಂದು ಬಹಳ ವ್ಯಸನವಾಗುತ್ತದೆ.

ನಾವು ಸುಖೀ ರಾಜ್ಯ ಬರುತ್ತದೆ, ರಾಮ ರಾಜ್ಯ ಬರುತ್ತದೆ ಎಂದು ತಿಳಿದುಕೊಂಡಿದ್ದೆವು. ಎಲ್ಲ ಜನರಿಗೂ ಅನ್ನ ಬಟ್ಟೆ ಸಿಕ್ಕುತ್ತವೆ; ದೀನದರಿದ್ರರಿಗೆ, ಮುದುಕರು, ಅನಾಥರಿಗೆ, ಇನ್ನೂ ಕೂಡ ಹಿಂದೆ ಬಿದ್ದಿರುವವರಿಗೆ ಸಹಾಯವಾಗುತ್ತದೆ ಎಂದು ಮಾಡಿದ್ದೆವು. ಈಗ ಅವರ ಈ ಬಜೆಟ್‌ನೊಳಗೆ ಅಂಥಾ ವಿಚಾರವೇ ಇಲ್ಲ. ನೆರೆ ರಾಜ್ಯವಾದ ಕೇರಳ ಇದೆ. ಅಲ್ಲಿ "old age pension" sanction ಮಾಡಿದ್ದಾರೆ. ಮದರಾಸಿನಲ್ಲೂ ಇದೇ ರೀತಿ ಮುಂದು ವರಿದಿದ್ದಾರೆ. ಮೈಸೂರಿನಲ್ಲಿ ಏಕೆ ಮಾಡಿಲ್ಲ ಎಂದರೆ ಇವರಲ್ಲಿ ಇರುವ ಕಚ್ಚಾಟವೇ ಕಾರಣ ಮತ್ತೆ ಈ